# ಸೈಬರ್ ವಂಚನೆ ಅರಿವು ಕಾರ್ಯಕ್ರಮ



**ಸುದ್ದಿ ಸಂಕೇಶ್ವರ:**

ಸೈಬರ್ ಭದ್ರತೆಯು ಕೂಡಾ ಜೀವನದ ಮುಖ್ಯ ಉದ್ದೇಶ ಎಂದು ಪುಣೆಯ ಕ್ವಿಕ್ ಹೀಲ್ ಪೌಂಡೇಶನ್ ಹಾಗೂ ನಿಡಿಸೋಸಿಯ ಎಸ್‌ಜಿಪಿಎನ್ ಬಿಸಿಎ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ ಸೈಬರ್ ಸುರಕ್ಷತೆ ಕಾರ್ಯಾಗಾರದಲ್ಲಿ ಅನಕ್ಷರಸ್ಥರು ಮಾತ್ರವಲ್ಲ ಅಕ್ಷರಸ್ಥರೂ ಸೈಬರ್ ವಂಚನೆಗೆ ಒಳಗಾಗುತ್ತಿರುವುದು ಆತಂಕಕಾರಿಯೆ ಎಂದು ಸೈಬರ್ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು CLE's highschool karoshi ಗೆ ನಿಖಿಲ್ ಸತ್ಯನಾಯಿಕ ಮತ್ತು ಬಾಳೇಶ ಉಳ್ಳಾಗಡ್ಡಿ ಎಂಬ ವಿದ್ಯಾರ್ಥಿಗಳು ಬೇಟಿ ನೀಡಿ ವಿಧ್ಯಾರ್ಥಿಗಳಿಗೆ ಸೈಬರ್ ವಂಚನೆ ಎಂದರೆ ಏನು?, ಸೈಬರ್ ವಂಚಕರು ಯಾವ ರೀತಿಯಾಗಿ ವಂಚನೆ ಮಾಡಬಹುದು, ವಂಚನೆಗಳಿಂದ ಹೇಗೆ ನಾವು ಭದ್ರವಾಗಿರಬೇಕು ಎಂದು ಅರಿವು ಮೂಡಿಸುವ ಕಾರ್ಯವನ್ನು ಮಾಡಿದ್ದಾರೆ. ಪೊಲೀಸ್ ಇಲಾಖೆ, ರಾಜ್ಯ ಸರಕಾರ ಹಾಗೂ ಕೆಂದ್ರ ಸರಕಾರ ಸೈಬರ್ ವಂಚನೆ ತಡೆಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಆದರೂ ಜನರು ವಂಚನೆಗೆ ಒಳಗಾಗುತ್ತಿದ್ದಾರೆ. ಹಾಗಾಗಿ, ಒಟಿಪಿ, ಹುಸಿಲಿಂಕ್‌ಗಳ ಬಗ್ಗೆ ಎಚ್ಚರವಿರಬೇಕು ಎಂದರು. ಈ ಒಂದು ಕಾರ್ಯಾಗಾರದಲ್ಲಿ ಬಸವರಾಜ ಹಾಲಭಾವಿ, ಪವನ್ ಹಿರೇಮಠ, ಆನಂದ ಸೋನಾರ ಸಹಕರಿಸಿದರೂ ಎಂದು ತಿಳಿಸಿದ್ದಾರೆ.